

ಅನುಭವ ಮಥನ

## ಮಾಯದ ಗಾಯ

# ಚೆರ್ನೋಬಿಲ್ ಮಹಾದುರಂತ

ಉಕ್ರೇನ್‌ನಲ್ಲಿ ಅಚಾತುರ್ಯದಿಂದ ಸಂಭವಿಸಿದ ಚೆರ್ನೋಬಿಲ್ ದುರಂತದ (1986) ಭೀಕರ ಪರಿಣಾಮಗಳು ಇನ್ನೂ ಕೊನೆಗೊಂಡಿಲ್ಲ. ಸಂತ್ರಸ್ತರ ಆಕ್ರಂದನ ಸದ್ಯಕ್ಕೆ ಕೊನೆಗೊಳ್ಳುವಂತಹದ್ದೂ ಅಲ್ಲ. ಆ ವಿಧ್ವಂಸಕ ಘಟನೆ ನಡೆದ ಭೂಮಿಯಲ್ಲೇ ಈಗ ಯುದ್ಧ ನಡೆದಿದೆ. ರಷ್ಯಾದ ಯುದ್ಧೋನ್ಮಾದ ಮತ್ತೊಂದು ಅಣು ದುರಂತದ ಆತಂಕ ಮೂಡಿಸಿದೆ. ಅಂದಹಾಗೆ, ಏನದು ಚೆರ್ನೋಬಿಲ್ ದುರಂತ? ಅದು ನಡೆದದ್ದು ಹೇಗೆ? ಪರಿಣಾಮಗಳೇನು? ನೆನಪಿಸಿಕೊಳ್ಳಲಿದು, ನೆನಪಿಟ್ಟುಕೊಳ್ಳಲಿದು ಸಕಾಲ.

■ ಲಕ್ಷ್ಮೀದೇವಿ ಪಾಟೀಲ

ಹಿಂದೊಮ್ಮೆ ತನ್ನದೇ ಭಾಗವಾಗಿದ್ದ ಪುಟ್ಟ ದೇಶ ಉಕ್ರೇನ್‌ನ ಮೇಲೆ ರಷ್ಯಾ ಮುಗಿಬಿದ್ದಿರುವುದು, 1986ರ ಏಪ್ರಿಲ್ 25–26ರಂದು ಸಂಭವಿಸಿದ್ದ ಚೆರ್ನೋಬಿಲ್ ಮಹಾದುರಂತವನ್ನು ನೆನಪಿಸುತ್ತಿದೆ. ಮತ್ತೊಂದು ಮಹಾದುರಂತ ಅದೇ ನೆಲದಲ್ಲಿ ಸಂಭವಿಸಿದಿರಲಿ ಎನ್ನುವ ಪ್ರಾರ್ಥನೆ ಶಾಂತಿಪ್ರಿಯರದು. ಯುದ್ಧೋನ್ಮಾದದಲ್ಲಿ ಹೂಂಕರಿಸುತ್ತಿರುವ ರಷ್ಯಾ ಚರ್ನೋಬಿಲ್ ದುರಂತವನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕು.

1986ರಲ್ಲಿ ನಡೆದ ಪರಮಾಣು ವಿದ್ಯುತ್ ಸ್ಥಾವರದ ಸ್ಫೋಟದಿಂದ ಉಂಟಾದ ಸಾವುನೋವುಗಳ ನಿಖರವಾದ ದಾಖಲೆ ಇದುವರೆಗೂ ಸಿಕ್ಕಿಲ್ಲ. ಕಳಪೆ ವಿನ್ಯಾಸ, ಸರಿಯಾದ ನಿರ್ವಹಣೆ ಇಲ್ಲದಿರುವಿಕೆ, ತರಬೇತಿಯೇ ಇರದ ಸ್ಥಾವರ ಸಿಬ್ಬಂದಿಯ ಅಚಾತುರ್ಯದಿಂದಾಗಿ ದುರ್ಘಟನೆ ಸಂಭವಿಸಿತ್ತು. ಈಗಾಗಲೇ ರಷ್ಯಾದ ಮಿಲಿಟರಿ ಪಡೆಯು ಅಣುಸ್ಥಾವರವಿರುವ ಉಕ್ರೇನ್‌ನ ಔದ್ಯಮಿಕ ನಗರ ಝೂಪರಾಷಿಯವನ್ನು ವಶಪಡಿಸಿಕೊಂಡಿದೆ. ಸ್ಥಾವರದ ಪಕ್ಕದಲ್ಲಿಯೇ ಕಾಣಿಸಿಕೊಂಡಿದ್ದ ಬೆಂಕಿ ಆತಂಕ ಮೂಡಿಸಿತ್ತು. ಅಲ್ಲೇನಾದರೂ ಬಾಂಬ್ ದಾಳಿ ನಡೆದರೆ, ಅದು ಚೆರ್ನೋಬಿಲ್ ದುರಂತದ ಹತ್ತು ಪಟ್ಟು ದೊಡ್ಡ ವಿಪತ್ತಾಗಲಿದೆ. ಚೆರ್ನೋಬಿಲ್‌ನ ನಿಷೇಧಿತ ಪ್ರದೇಶವನ್ನು ರಷ್ಯಾ ಆಕ್ರಮಿಸಿಕೊಂಡಿದ್ದು, ಆ ಪ್ರದೇಶದಲ್ಲಿ ವಿಕಿರಣದ ತೀವ್ರತೆ ಹೆಚ್ಚಾಗಿದೆ. ವಿದ್ಯುತ್ ಸ್ಥಾವರವಿದ್ದ ಪಾಳು ಪ್ರದೇಶದ ವಶಪಡಿಸಿಕೊಳ್ಳುವಿಕೆಯನ್ನು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸಲಾಗುತ್ತಿದ್ದು, ಆ ಪ್ರಯತ್ನ ಯೂರೋಪ್ ದೇಶಗಳನ್ನು ಬೆದರಿಸುವ